# ಕಥೆ ಹೇಳುವುದರ ಮೂಲಕ ಮಕ್ಕಳನ್ನು ತೊಡಗಿಸಿಕೊಳ್ಳುವುದು

ಅಮೃತಾ ಮಾಸಿ

ಸಾಂಪ್ರದಾಯಿಕ ಬೋಧನಾ ವಿಧಾನಗಳಿಗಿಂತ, ಮಕ್ಕಳಿಗೆ ಕಥೆಗಳ ಮೂಲಕ ಪಾಠಗಳನ್ನು ಹೇಳುವುದರಿಂದ ಮಕ್ಕಳು ಆ ವಿಷಯಗಳನ್ನು ಬಹಳ ಕಾಲದವರೆಗೂ ನೆನಪಿಟ್ಟುಕೊಳ್ಳುತ್ತಾರೆ ಎಂಬುದು ಒಬ್ಬ ಶಿಕ್ಷಕಿಯಾಗಿ ನನ್ನ ನಂಬಿಕೆ. ವಿಶೇಷವಾಗಿ ಭಾಷಾ ವಿಷಯಗಳಲ್ಲಿ ಕಥೆ ಹೇಳುವಿಕೆಯು ಮಕ್ಕಳನ್ನು ಹೆಚ್ಚು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆಯಲ್ಲದೆ, ಇದರಿಂದ ಮಕ್ಕಳು ದೀರ್ಘ ಕಾಲದವರೆಗೆ ಪರಿಕಲ್ಪನೆ ಮತ್ತು ಪಾತ್ರಗಳನ್ನು ನೆನಪಿಟ್ಟುಕೊಳ್ಳಲು ಸಾಧ್ಯವಾಗುತ್ತದೆ.

ಇದನ್ನು ಗಮನದಲ್ಲಿಟ್ಟುಕೊಂಡು ನನ್ನದೇ ಆದ ಪಾಠ ಯೋಜನೆಯನ್ನು ರೂಪಿಸುವ ಮುನ್ನ, ಕಥೆ ಹೇಳುವುದರ ಬಗ್ಗೆ ಮಕ್ಕಳ ಅಭಿಪ್ರಾಯಗಳನ್ನು ಯಾಕೆ ಪಡೆಯಬಾರದು ಎಂದು ನಾನು ಯೋಚಿಸಿದೆ. ತರಗತಿ ಚಟುವಟಿಕೆಗಳನ್ನು ರೂಪಿಸುವ ಬಗ್ಗೆ ಶಿಕ್ಷಕರು ಮಕ್ಕಳೊಡನೆ ಚರ್ಚಿಸಿದರೆ, ಮಕ್ಕಳ ಅಗತ್ಯತೆಗಳು ಹಾಗೂ ಆಸಕ್ತಿಗಳಿಗೆ ಅನುಗುಣವಾಗಿ ಯೋಜನೆ ರೂಪಿಸಲು ಮತ್ತು ತರಗತಿಯ ಪ್ರಕ್ರಿಯೆಗಳಲ್ಲಿ ಮಕ್ಕಳ ತೊಡಗಿಸುವಿಕೆಯನ್ನು ಇನ್ನಷ್ಟು ಹೆಚ್ಚಿಸಲು ಶಿಕ್ಷಕರಿಗೆ ಸಹಾಯ ಮಾಡುತ್ತದೆ.

ಹಾಗಾಗಿ, ಕಥೆ ಹೇಳುವುದರ ಕುರಿತು ಮಕ್ಕಳೊಡನೆ ಅವರ ಅಭಿಪ್ರಾಯವೇನೆಂದು ಕೇಳಿದೆ. ಅವರು ನನ್ನೊಡನೆ ಹಂಚಿಕೊಂಡದ್ದು ಇಷ್ಟು: 'ಕಥೆ ಹೇಳುವುದರ ಮೂಲಕ ನಾವು ಹೊಸ ಪದಗಳನ್ನು ಹಾಗೂ ವಾಕ್ಯ ರಚನೆಗಳನ್ನು ತಿಳಿದುಕೊಂಡೆವು. ಪ್ರಶ್ನೆಗಳನ್ನು ರೂಪಿಸುವುದನ್ನು ಕಲಿತೆವು. ಕಥೆಯು ಬಹಳ ಮೋಜಿನಿಂದ ಕೂಡಿರುತ್ತದೆಯಾದ್ದರಿಂದ ಓದುವುದು, ಬರೆಯುವುದು ಹಾಗೂ ಕಾಗುಣಿತ ಸುಲಭವಾಗುತ್ತದೆ. ಹೊಸ ಪದಗಳ ಸರಿಯಾದ ಉಚ್ಚಾರಣೆಯನ್ನು ಕಲಿಯುತ್ತೇವೆ'. ಮಕ್ಕಳ ಅಭಿಪ್ರಾಯಗಳನ್ನು ತಿಳಿದು ನನಗೆ ಬಹಳ ಸಂತಸವಾಯಿತು. ಮಕ್ಕಳು ನಮ್ಮಂತೆಯೇ ಯೋಚಿಸುತ್ತಾರೆ, ಆದರೆ ಕೆಲವೊಮ್ಮೆ ತರಗತಿಯ ಪ್ರಕ್ರಿಯೆಗಳಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಹಿರಿಯರಾದ ನಾವು ಅವರಿಗೆ ಅವಕಾಶ ಕೊಡುವುದಿಲ್ಲ.

ಶಿಕ್ಷಕರು ಮಕ್ಕಳೊಡನೆ ಚರ್ಚಿಸಿ, ಅವರ ಜತೆ ಸೇರಿ ಯೋಜನೆಗಳನ್ನು ರೂಪಿಸಿದಾಗ, ತಮ್ಮ ವಿಚಾರಗಳನ್ನೂ ಅಳವಡಿಸಿಕೊಂಡಿರುವುದರಿಂದ ಚಟುವಟಿಕೆಗಳಲ್ಲಿ ಮಕ್ಕಳ ಆಸಕ್ತಿ ಹಾಗೂ ತೊಡಗಿಸಿಕೊಳ್ಳುವಿಕೆಯನ್ನು ನಾವು ನೋಡಬಹುದು. ಇಲ್ಲೊಂದು ಉದಾಹರಣೆ:

ಶಿಕ್ಷಕ: ನಾವು ಇಂದು ಅಥವಾ ನಾಳೆ ಓದುವ ಕಥೆಯಲ್ಲಿ ನೀವು ಹೇಳಿರುವಂತಹ ಎಲ್ಲಾ ವಿಚಾರಗಳ ಮೇಲೂ ಗಮನಹರಿಸಬೇಕೇ?

ಮಕ್ಕಳು: ಇಲ್ಲ, ನಾವು ಮೂರು ವಿಚಾರಗಳ ಮೇಲೆ ಗಮನಹರಿಸೋಣ.

ಶಿಕ್ಷಕ: ಹಾಗಾದರೆ ಯಾವುದರ ಮೇಲೆ ಗಮನಹರಿಸೋಣ?

ಮಕ್ಕಳು: ಕಥೆಯಲ್ಲಿ ಬರುವ ಹೊಸ ಪದಗಳನ್ನು ಬರೆಯುತ್ತೇವೆ, ಶಬ್ದಕೋಶದಲ್ಲಿ ಅವುಗಳ ಅರ್ಥಗಳನ್ನು ಹುಡುಕುತ್ತೇವೆ ಹಾಗೂ ಆ ಹೊಸ ಪದಗಳಿಂದ ಕೆಲವು ವಾಕ್ಯಗಳನ್ನು ರಚಿಸುತ್ತೇವೆ.

ಶಿಕ್ಷಕ: ಸರಿ. ನಾವು ಮತ್ತಿನ್ನೇನು ಮಾಡೋಣ?

ಮಕ್ಕಳು: ನಾವು ಓದುವ ಹಾಗೂ ಬರೆಯುವ ಅಭ್ಯಾಸ ಮಾಡುತ್ತೇವೆ.

ಶಿಕ್ಷಕ: ಯಾವ ಕಥೆಯೆಂದು ನಿರ್ಧರಿಸೋಣ. ಕಥೆ ಹೇಳುವ ಚಟುವಟಿಕೆಗಾಗಿ ಕಥೆಯನ್ನು ಆಯ್ಕೆ ಮಾಡಲು ನಾನು ಮಕ್ಕಳಿಗೆ ಕೆಲವೊಂದು ಪುಸ್ತಕಗಳನ್ನು ನೀಡಿದೆನು. ಅವರು ಅನ್ಯಾಲಿಸ್ ಇನ್ ವಂಡರ್‌ಲ್ಯಾಂಡ್ (Alice in Wonderland) ಎಂಬ ಕಥೆಯನ್ನು ಆರಿಸಿಕೊಂಡರು. ನಾನು ಕಥೆ ಹೇಳಲು ಆರಂಭಿಸಿದೆನು. ಎಲ್ಲಾ ಮಕ್ಕಳು ಬಹಳ ಲಕ್ಷ್ಯವಿಟ್ಟು ಕೇಳುತ್ತಿದ್ದರು. ನಾನು ಕಥೆ ಪುಸ್ತಕದಿಂದ ತೋರಿಸುತ್ತಿದ್ದ ಚಿತ್ರಗಳನ್ನು ಬಹಳ ಮೆಚ್ಚುತ್ತಿದ್ದರು. ಕಥೆ ಓದುವ ಸಮಯದಲ್ಲಿ ನನ್ನ ಧ್ವನಿಯ ಏರಿಳಿತಗಳನ್ನು ಕೆಲವು ಮಕ್ಕಳು ಗಮನವಿಟ್ಟು ಕೇಳುತ್ತಿದ್ದರು. ಕಥೆಯ ಎರಡು ಪ್ಯಾರಾಗ್ರಾಫ್‌ಗಳನ್ನು ಓದಿದ ನಂತರ ನಾನು ಕೆಲವು ಪ್ರಶ್ನೆಗಳನ್ನು ಕೇಳಿದೆನು: ಕಥೆಯಲ್ಲಿ ಬರುವ ಕೆಲವು ಪದಗಳನ್ನು ಹೇಳಿರಿ. ಇಲ್ಲಿಯವರೆಗೆ ಕಂಡುಬಂದ ಮುಖ್ಯ ಪಾತ್ರಗಳು ಯಾವುವು? ಕಥೆ ಯಾವುದರ ಕುರಿತು ಹೇಳುತ್ತಿದೆ?ತಾವು ಕೇಳಿದ ಕೆಲವು ಪದಗಳನ್ನು ಪಟ್ಟಿಮಾಡಿದ ನಂತರ, ಮಕ್ಕಳು ಎರಡು ಪ್ಯಾರಾಗ್ರಾಫ್‌ಗಳಲ್ಲಿ ಬರುವ ಮುಖ್ಯ ಪಾತ್ರಗಳು ಒಂದು ಚಿಕ್ಕ ಹುಡುಗಿ ಮತ್ತೊಂದು ಬಿಳಿ ಮೊಲ ಎಂದು ಹೇಳಿದರು. ಒಂದು ಮೊಲದ ಹಿಂದೆ ಓಡುತ್ತಿರುವ ಚಿಕ್ಕ ಹುಡುಗಿಯೊಬ್ಬಳ ಕಥೆಯಿದು. ಈ ಮಧ್ಯದಲ್ಲಿ ಕಥೆಯ ಕಾಲ್ಪನಿಕ ಜಗತ್ತಿನಲ್ಲಿ ಬರುವ ವಿವಿಧ ವಸ್ತುಗಳು ಹಾಗೂ ಪಾತ್ರಗಳ ಕುರಿತು ನಾವು ಮಾತನಾಡುತ್ತಿದ್ದೆವು. ಕಥೆಯ ಮುಕ್ತಾಯದ ನಂತರ ಅವರು ಮೊದಲ ಸಲ ಕೇಳಿದ ವಿಭಿನ್ನ ಪದಗಳ ಬಗ್ಗೆ ಮಾತನಾಡಿದೆವು, ನಿಘಂಟಿನಲ್ಲಿ ಅವುಗಳನ್ನು ಹುಡುಕಿ, ಆ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿದೆವು. ವಿದ್ಯಾರ್ಥಿಗಳೊಡನೆ ಅದ್ಭುತ ಅನುಭವದೊಂದಿಗೆ ಆ ದಿನದ ತರಗತಿಯು ಮುಕ್ತಾಯವಾಯಿತು.

ಮರುದಿನ, ಒಂದು ಮಗು ಇನ್ನೊಂದು ಮಗುವಿನ ಜೊತೆ ಬೆರೆತು ಕಲಿಯಲು ಸಹಾಯಕವಾಗುವಂತೆ (ಸಹವರ್ತಿಗಳೊಂದಿಗೆ ಕಲಿಯುವುದು) ಇಬ್ಬರು ವಿದ್ಯಾರ್ಥಿಗಳನ್ನು ಒಳಗೊಂಡ ತಂಡಗಳಾಗಿ ವಿಂಗಡಿಸಿದೆವು ಮಕ್ಕಳಿಗೆ ಇದು ಓದುವ ದಿನವಾಗಿದ್ದು, ಕೆಲವು ಮಕ್ಕಳು ಪದಗಳ ಉಚ್ಚಾರಣೆಯ ಬಗ್ಗೆ ಕೇಳಿ ತಿಳಿದುಕೊಂಡರು. ಬಳಿಕ ನಾವು ಅನ್ಯಾಲಿಸ್ ಇನ್ ವಂಡರ್‌ಲ್ಯಾಂಡ್ ಚಲನಚಿತ್ರವನ್ನು ನೋಡುವುದೆಂದು ತೀರ್ಮಾನಿಸಿದೆವು.

ಮರುದಿನ ನಾವು ಅನ್ಯಾಲಿಸ್ ಇನ್ ವಂಡರ್‌ಲ್ಯಾಂಡ್ ಚಲನಚಿತ್ರವನ್ನು ನೋಡುವುದರೊಂದಿಗೆ ತರಗತಿ ಆರಂಭಿಸಿದೆವು. ಗ್ರಂಥಾಲಯದಲ್ಲಿ ಚಲನಚಿತ್ರವನ್ನು ನೋಡಲು ಏರ್ಪಡಿಸಿದ್ದರಿಂದ ಮಕ್ಕಳು ನಿಶ್ಶಬ್ದವಾಗಿ ಕುಳಿತಿದ್ದರು. ಚಲನಚಿತ್ರವನ್ನು ನೋಡಿದ ನಂತರ ಅದರ ಬಗ್ಗೆ ಚರ್ಚಿಸಲು ತೀರ್ಮಾನಿಸಿದೆವು. ಚಲನಚಿತ್ರವನ್ನು ನೋಡಿದ ನಂತರ ಕೆಲವು ಮಕ್ಕಳು ಇಂತಹ ಅದ್ಭುತವಾದ ಹಾಗೂ ಕಾಲ್ಪನಿಕವಾದ ಚಲನಚಿತ್ರವನ್ನು ಮೊದಲೆಂದೂ ನೋಡಿರಲಿಲ್ಲ ಎಂದು ಹೇಳಿದರು. ಅವರೆಲ್ಲರೂ ಚಲನಚಿತ್ರದ ಕುರಿತು ಚರ್ಚಿಸಲು ಬಹಳ ಖುಷಿಯಲ್ಲಿದ್ದರು. ಅವರು ಚಲನಚಿತ್ರವನ್ನು ನೋಡಿ ಆನಂದಿಸಿದರು, ನಂತರ ಚಲನಚಿತ್ರ ಮತ್ತು ಪುಸ್ತಕದ ನಡುವಿನ ವ್ಯತ್ಯಾಸಗಳ ಬಗ್ಗೆ ಚರ್ಚಿಸಿದೆವು. ಮಾರನೆಯ ದಿನ, ಮಕ್ಕಳಿಗೆ ಅನ್ಯಾಲಿಸ್ ಹಾಗೂ ಬಿಳಿ ಮೊಲದ ಬಗ್ಗೆ ಸ್ವಂತ ಕಥೆಯನ್ನು ಬರೆಯಲು ಹೇಳಿದೆನು. ಮಕ್ಕಳು ಬರೆದ ಕೆಲವು ಕಥೆಗಳು ಹಾಗೂ ವಿವಿಧ ಪ್ರಶ್ನೆಗಳನ್ನು ಹಂಚಿಕೊಳ್ಳುತ್ತೇನೆ.

ಕೊನೆಯದಾಗಿ, ಕಥೆಯನ್ನು ಆಧರಿಸಿದ ಆರು ವಾಕ್ಯಗಳನ್ನು ಅದಲುಬದಲಾಗಿಸಿ, ಅವುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸುವಂತೆ ಹೇಳಿದೆ. ಬಹುತೇಕ ಮಕ್ಕಳಿಗೆ ಈ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಯಿತು. ಅದಲುಬದಲು ಪದಗಳು, ಖಾಲಿ ಬಿಟ್ಟ ಸ್ಥಳ ತುಂಬುವುದು, ಪ್ರಾಸಬದ್ಧ ಪದಗಳು – ಎಲ್ಲವನ್ನೂ ಮಕ್ಕಳೇ ತಯಾರಿಸಿದರು.

ವಿವಿಧ ಚಟುವಟಿಕೆಗಳ ಮೂಲಕ ಒಂದು ಭಾಷೆಯನ್ನು ಕಲಿಯಲು, ಮಕ್ಕಳು ಯೋಜನಾ ಹಂತದಿಂದಲೇ ಸಕ್ರಿಯವಾಗಿ ಭಾಗವಹಿಸಿ ಆಸಕ್ತಿ ಹೊಂದಿದ್ದ ಕಾರಣ ಕಥೆ ಹೇಳುವ ಚಟುವಟಿಕೆಯು ಬಹಳ ಉಪಯುಕ್ತವಾಯಿತು. ಕೆಲವು ಕಾರ್ಯವಿಧಾನಗಳ ಬದಲಾವಣೆಯಿಂದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಬ್ಬರ ಕಲಿಕೆಗೂ ಸಹಾಯವಾಗುತ್ತದೆ ಎಂದು ಇದರಿಂದ ತಿಳಿಯುವಂತಾಯಿತು.

**ಭಾಷಾ ತರಗತಿಗೆ ಕೆಲವು ಯೋಜನೆಗಳು**

1. ಯೋಜನಾ ಹಂತದಿಂದಲೇ ತರಗತಿಯ ಮಕ್ಕಳನ್ನು ತೊಡಗಿಸಿಕೊಳ್ಳಬೇಕು, ಆದರೆ ಏನನ್ನು ಕಲಿಸಬೇಕು ಎಂಬುದರ ಬಗ್ಗೆ ಸ್ಪಷ್ಟತೆಯಿರಬೇಕು.
2. ಯೋಜನೆಯನ್ನು ಅತೀ ಸಣ್ಣ ಭಾಗಗಳಾಗಿ ವಿಂಗಡಿಸಬೇಕು: ಕಥೆಯನ್ನು ಅರ್ಥ ಮಾಡಿ–ಕೊಳ್ಳುವುದು, ಓದುವುದು, ಅದರ ಬಗ್ಗೆ ಬರೆಯುವುದು, ಉಚ್ಛಾರಣೆ, ಅನುಕ್ರಮ ಇತ್ಯಾದಿ.
3. ಹೆಚ್ಚು ಪಾತ್ರಗಳಿಲ್ಲದ ಸರಳ ಕಥೆ ಪುಸ್ತಕಗಳನ್ನು ಆರಿಸಿಕೊಳ್ಳಬೇಕು.
4. ಸಾಧ್ಯವಾದರೆ ಕಥೆಯನ್ನು ಆಧರಿಸಿದ ಚಲನಚಿತ್ರವನ್ನು ತೋರಿಸುವುದು. ಇದರಿಂದ ಮಕ್ಕಳು ಇನ್ನೂ ಹೆಚ್ಚು ತೊಡಗಿಸಿಕೊಳ್ಳುತ್ತಾರೆ.
5. ಮೌಖಿಕ ಹಾಗೂ ಬರವಣಿಗೆಯ ಕೆಲಸವೂ ಇರಲಿ.



**ಅಮೃತಾ** ಅವರು 2012ರಿಂದ ಛತ್ತೀಸ್‌ಗಢದ ಧಮ್ ತರಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು 2000ದಲ್ಲಿ ಒಂದು ಖಾಸಗಿ ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಆರಂಭಿಸಿದ್ದು, ಅಲ್ಲಿ ಆಂಗ್ಲಭಾಷೆ ಹಾಗೂ ವಿಜ್ಞಾನವನ್ನು ಬೋಧಿಸುತ್ತಿದ್ದರು. ಆನಂತರ ಅವರು ವಿಜ್ಞಾನ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದರು. ಜೀವಶಾಸ್ತ್ರ ಮತ್ತು ಶಿಕ್ಷಣ ವಿಷಯಗಳಲ್ಲಿ ಪದವಿ, ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅವರು ಇತ್ತೀಚೆಗಷ್ಟೇ ಡಿಎಲ್‌ಎಡ್ ಮುಗಿಸಿದ್ದಾರೆ ಹಾಗೂ ಮಕ್ಕಳೊಂದಿಗೆ ಕೆಲಸ ಮಾಡುವುದೆಂದರೆ ಅವರಿಗೆ ತುಂಬಾ ಪ್ರೀತಿ. ಅಮೃತಾ ಅವರನ್ನು
amrita.masih@azimpremjifoundation.org ಇಲ್ಲಿ ಸಂಪರ್ಕಿಸಬಹುದು.

ಅನುವಾದ: **ವಿನಯ ವಿಠ್ಠಲ್** । ಪರಿಶೀಲನೆ: **ಲತಾ ಕೆ ಸಿ**